ಅವಕಾಶ ಮಾಡಿಕೊಟ್ಟಿದ್ದೇವೆ. ಸರ್ಕಾರದ ವತಿಯಿಂದ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುತ್ತೇವೆ. ಇದರ ಜೊತೆಗೆ ಕೇಂದ್ರಸರ್ಕಾರಕ್ಕೆ ಇದರ ಬಗ್ಗೆ ಪತ್ರವನ್ನು ಬರೆದು ಕೇಳಿದ್ದೇವೆ. ಅವರಿಂದ ನಾವು ಹಣವನ್ನು ನಿರೀಕ್ಷೆ ಮಾಡುತ್ತಿದ್ದೇವೆ. ಅದು ಬಂದಕೂಡಲೇ ಆ ಹಣವನ್ನೂ ಕೂಡ ಕೊಡುತ್ತೇವೆ.

ಪುದ್ದೊಟ್ಟು ಬೆಳ್ಳಾರೆ ಮತ್ತು ಅರಂತೋಡು ಸೇತುವೆಗಳ ಬಗ್ಗೆ

೯೩೫ (೩೦೩೪) ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದ ಪುದ್ದೊಟ್ಟು ಬೆಳ್ಳಾರೆ ಸೇತುವೆ ಮತ್ತು ಅರಂತೋಡು ಸೇತುವೆ ೧೯೮೬-೮೭ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ ಆಯವ್ಯಯದಲ್ಲಿ ಮಂಜೂರಾಗಿರುವುದು ನಿಜವೇ ? ಸದ್ರಿ ಅರಂತೋಡು ಸೇತುವೆಗೆ ಮಾನ್ಯ ಲೋಕೋಪಯೋಗಿ ಸಚಿವರು ಶಿಲಾನ್ಯಾಸ ಮಾಡಿರುವುದು ನಿಜವೇ ?

ಆ) ಹಾಗಿದ್ದರೂ ಈ ಎರಡು ಸೇತುವೆಗಳನ್ನು ಸರ್ಕಾರ ೩ ವರ್ಷಗಳು ಕಳೆದರೂ ೩ ಸಲ ದರ ಪಟ್ಟಿ ಕರೆದರೂ ಇನ್ನೂ ಪ್ರಾರಂಭಿಸಿಸುವುದಿಲ್ಲ ನಿಜವೇ ? ಈ ಕಾಮಗಾರಿ ಈಗ ಜಿಲ್ಲಾ ಪರಿಷತ್ ವ್ಯಾಪ್ತಿಗೆ ಬಂದರೂ ಜಿಲ್ಲಾ ಪರಿಷತ್ತಿಗೆ ಸರ್ಕಾರದಿಂದ ತಾಂತ್ರಿಕ ಮಂಜೂರಾತಿ ಹಾಗೂ ಹಣ ಬಿಡುಗಡೆ ಗೊಳಿಸದೆ ಇರಲು ಕಾರಣವೇನು ?

ಇ) ಈ ಎರಡು ಸೇತುವೆಗಳ ನಿರ್ಮಾಣದ ಬಗ್ಗೆ ಸರ್ಕಾರದವರು ಈಗಲಾದರೂ ಕ್ರಮ ಕೈಗೊಳ್ಳುವರೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು).—

ಅ) ಪುದ್ದೊಟ್ಟು ಬೆಳ್ಳಾರೆ ಮತ್ತು ಅರಂತೋಡು ಸೇತುವೆಗಳನ್ನು ೧೯೮೬-೮೭ನೇ ಸಾಲಿನ ಆಯವ್ಯಯದಲ್ಲಿ ಸೇರಿವೆ. ಅರಂತೋಡು ಸೇತುವೆಗೆ ಮಾನ್ಯ ಲೋಕೋಪಯೋಗಿ ಸಚಿವರು ೧೯೮೬ ರ ಡಿಸೆಂಬರ್ ಮಾಸದಲ್ಲಿ ಶಿಲಾನ್ಯಾಸ ಮಾಡಿರುವುದು ನಿಜ.

ಆ) i) ಪುದ್ದೊಟ್ಟು ಬೆಳ್ಳಾರೆ ರಸ್ತೆಯ ಗಾರಿಹೊಳೆಗೆ ಅಡ್ಡಲಾಗಿ ನಿರ್ಮಿಸಬೇಕಾಗಿರುವ ಸೇತುವೆಯ ಕಾಮಗಾರಿಗೆ ಎರಡು ಬಾರಿ ಟೆಂಡರ್ ಕರೆದರೂ ಟೆಂಡರ್ ಹಾಕಲು ಗುತ್ತಿಗೆದಾರರು ಮುಂದೆ ಬರಲಿಲ್ಲ. ೧೯೮೫-೮೬ ಸಾಲಿನಲ್ಲಿ ಪುನಃ ಟೆಂಡರ್ ಕರೆದು ಗುತ್ತಿಗೆದಾರರನ್ನು ನಿಗಧಿಪಡಿಸಿ ಕೆಲಸವನ್ನು ಪ್ರಾರಂಭಿಸಿದಾಗ ತಲೆದೋರಿದ ತಳಪಾಯ ಸಮಸ್ಯೆಗಳಿಂದಾಗಿ ಕೆಲಸವನ್ನು ಮುಂದುವರಿಸಲಾಗಲಿಲ್ಲ. ಈಗ ವಿನ್ಯಾಸವನ್ನು ಬದಲಾಯಿಸಿ ೧೬ ಲಕ್ಷ ರೂಗಳಿಗೆ ಪರಿಷ್ಕೃತ ಅಂದಾಜನ್ನು ತಯಾರಿಸಲಾಗಿದ್ದು, ೧೯೮೮-೮೯ನೇ ಸಾಲಿನಲ್ಲಿ ಜಿಲ್ಲಾಪರಿಷತ್ ಆಯವ್ಯಯದಲ್ಲಿ ಈ ಕಾಮಗಾರಿಗೆ ಒಂದು ಲಕ್ಷ ರೂಗಳ ಅನುದಾನ ನೀಡಲಾಗಿದೆ.

ii) ಅರಂತೋಡು ಸೇತುವೆ ಕೆಲಸದ ಅಂದಾಜಿಗೆ ೧೯೮೬-೮೭ನೇ ಸಾಲಿನಲ್ಲಿ ಮುಖ್ಯ ಇಂಜಿನಿಯರು ಸಂಪರ್ಕ ಮತ್ತು ಕಟ್ಟಡಗಳು ಇವರಿಂದ ೨೦ ಲಕ್ಷ ರೂಗಳಿಗೆ ತಾಂತ್ರಿಕ ಮಂಜೂರಾತಿ ನೀಡಲಾಗಿದೆ. ಈ ಕಾಮಗಾರಿಗೆ ಒಂದು ಬಾರಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಿ ರದ್ದು ಗೊಳಿಸಲಾಯಿತು. ೧೯೮೭-೮೮ ರ ಸಾಲಿನಲ್ಲಿ ಜಿಲ್ಲಾ ಪರಿಷತ್‌ನವರು ಈ ಕಾಮಗಾರಿಗೆ ಯಾವ ಅನುದಾನವನ್ನು ಸೂಚಿಸಿಲ್ಲ. ೧೯೮೮-೮೯ನೇ ಸಾಲಿನಲ್ಲಿ ಈ ಕಾಮಗಾರಿಗೆ ಜಿಲ್ಲಾ ಪರಿಷತ್ತಿನ ಆಯವ್ಯಯದಲ್ಲಿ ೫೫,೦೦೦ ರೂಗಳ ಅನುದಾನವಿರುತ್ತದೆ.

ಇ) ಈ ಎರಡು ಸೇತುವೆಗಳ ನಿರ್ಮಾಣದ ಬಗ್ಗೆ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್‌ನವರು ಸೂಕ್ತ ಕ್ರಮ ತೆಗೆದುಕೊಳ್ಳಲು ತಿಳಿಸಲಾಗುವುದು.

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ, ನನ್ನ 'ಆ' ಪ್ರಶ್ನೆಗೆ ಉತ್ತರ ನೀಡಿರುವ ಪ್ರಕಾರ ೧೯೮೭-೮೩ರಲ್ಲಿ ಸುಳ್ಯ ಕ್ಷೇತ್ರದ ಪುದ್ದೊಟ್ಟು ಬೆಳ್ಳಾರೆ ಮತ್ತು ಅರಂತೋಡು ಸೇತುವೆಯ ನಿರ್ಮಾಣ

ಕಾರ್ಯಕ್ರಮಗಳಿಗಾಗಿ ಟೆಂಡರನ್ನು ಕರೆದ ಮೇಲೂ ಸರ್ಕಾರದ ತಟಸ್ಥ ದೋರಣೆಯಿಂದ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಅರಂತೋಡು ಸೇತುವೆಗೆ ೧೯೬೬ರಲ್ಲಿಯೇ ಶಿಲಾನ್ಯಾಸ ಮಾಡಿದ್ದರಿಂದ ಜನರು ಬಹಳ ಸಂತೋಷಪಟ್ಟಿದ್ದರು. ಆದರೆ ಇಲ್ಲಿಯವರೆಗೆ ಯಾವ ಕಾರ್ಯಕ್ರಮ ತೆಗೆದುಕೊಳ್ಳದಿರುವುದರಿಂದ ಬಹಳ ನಾಚಿಕೆ ಪಡುವ ಪರಿಸ್ಥಿತಿಯಾಗಿದೆ. ೨೦ ಲಕ್ಷರೂಪಾಯಿ ತಗಲುವ ಈ ಕಾಮಗಾರಿಗೆ ಸರ್ಕಾರದವರು ಕೇವಲ ೫೫ ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿರುತ್ತಾರೆ. ಈಗಾಗಲೇ ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದಮೇಲೆ ಈ ಕಾಮಗಾರಿಗೆ ಬಜೆಟ್‌ನಲ್ಲಿ ಇನ್ನೂ ಹೆಚ್ಚಿನ ಹಣವನ್ನು ಸರ್ಕಾರದವರು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ನಾವು ಈ ಎಲ್ಲ ಕೆಲಸಗಳನ್ನು ಜಿಲ್ಲಾ ಪರಿಷತ್ತಿಗೆ ವಹಿಸಿದ್ದೇವೆ. ನಿಯಮದ ಪ್ರಕಾರ ಜಿಲ್ಲಾ ಪರಿಷತ್ತಿಗೆ ಎಷ್ಟು ಹಣವನ್ನು ಒದಗಿಸಬೇಕೋ ಅಷ್ಟು ಹಣವನ್ನು ಒದಗಿಸಿ ಕೊಡಲು ಪಟ್ಟಿ ಮಾಡಿಸುತ್ತೇನೆ. ಅವರಿಗೆ ಹೆಚ್ಚಿಗೆ ಹಣವನ್ನು ಕೊಡಲು ಸರ್ಕಾರದಲ್ಲಿ ಯಾವುದೇ ಡಿಸ್ಕ್ರಿಷನರಿ ಗ್ರಾಂಟ್ ಇಲ್ಲ. ಆದ್ದರಿಂದ ಆ ಕೆಲಸವನ್ನು ಮಾಡತಕ್ಕಂಥ ಹೊಣೆಗಾರಿಕೆ ಅವರ ಮೇಲೆ ಬಿದ್ದಿದೆ. ಈ ಬಗ್ಗೆ ಜಿಲ್ಲಾ ಪರಿಷತ್ತಿಗೆ ಪತ್ರವನ್ನು ಬರೆಯುತ್ತೇನೆಯೇ ಹೊರತು ಸರ್ಕಾರ ಡೈರೆಕ್ಟಾಗಿ ಹಣವನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಜಿಲ್ಲಾ ಪರಿಷತ್‌ಗಳಿಗೆ ತಾವು ಕೊಟ್ಟಿರುವ ಹಣ ಯಾವ ಭಾಗಕ್ಕೂ ಸಾಲುವುದಿಲ್ಲ. ಈ ಹಣದಲ್ಲಿ ಬಹುಭಾಗ ಸಿಬ್ಬಂದಿ ಪಗಾರ್‌ಗೆ ಹೋಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಜಿಲ್ಲಾ ಪರಿಷತ್‌ಗಳಿಗೆ ಯಾವ ರೀತಿ ಹಣವನ್ನು ಕೊಡಬೇಕು ಎನ್ನುವ ಬಗ್ಗೆ ನಿಯಮಾವಳಿಗಳನ್ನು ರೂಪಿಸಿದ್ದೇವೆ. ಪರ್‌ಕ್ಯಾಪಿಟಾ ಎಷ್ಟು ಹಣ ಕೊಡಬೇಕು ಎನ್ನುವ ಎಲ್ಲವಿವರಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಡೆವೆಲಪ್‌ಮೆಂಟ್ ಗ್ರಾಂಟ್ಸ್ ಎಷ್ಟು ಬರುತ್ತದೆ ಅದರಲ್ಲಿ ಯಾವುದಕ್ಕೆ ಆದ್ಯತೆಯನ್ನು ಕೊಡಬೇಕು ಎನ್ನುವ ನಿರ್ಣಯವನ್ನು ಮಾಡತಕ್ಕಂಥದ್ದು ಸ್ಥಳೀಯ ಮುಖಂಡರುಗಳು ಮಾಡತಕ್ಕ ಒಂದು ನಿರ್ಣಯಕ್ಕೆ ಸೇರಿದೆ. ಒಂದು ವೇಳೆ ಅವರು ಈ ಕೆಲಸಕ್ಕೆ ಆದ್ಯತೆಯನ್ನು ಕೊಡಬೇಕು ಆ ಕೆಲಸವನ್ನು ಇನ್ನು ಸ್ವಲ್ಪದಿವಸ ತಳ್ಳಬೇಕೆಂದು ನಿರ್ಣಯ ತೆಗೆದುಕೊಂಡರೆ ನಾವು ಏನೂ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಆದರೂ ನಾನು ಅವರಿಗೆ ಈ ಬಗ್ಗೆ ಪತ್ರ ಬರೆಯುತ್ತೇನೆ.

ಪ್ರಾಥಮಿಕ ಶಾಲ ಶಿಕ್ಷಕರ ನೇಮಕಾತಿ ಬಗ್ಗೆ

೯೩೬. (೨೮೫೧) ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲು ಪೇಟೆ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಖಾಲಿಯಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಒಟ್ಟು ಸಂಖ್ಯೆ ಎಷ್ಟು ? ಹಾಗೂ, ಅವುಗಳು ಎಷ್ಟು ದಿನಗಳಿಂದ ಖಾಲಿ ಇವೆ ?

ಆ) ೧೯೬೮-೬೯ನೇ ಸಾಲಿನ ಶೈಕ್ಷಣಿಕ ವರ್ಷ ಪ್ರಾರಂಭವಾಗಿ ೪ ತಿಂಗಳು ಕಳೆದರೂ ಸಹ ಶಿಕ್ಷಕರ ನೇಮಕಾತಿಯನ್ನು ಮಾಡದೇ ಇರುವುದಕ್ಕೆ ಕಾರಣವೇನು ?

ಇ) ಈ ನೇಮಕಾತಿಗಳನ್ನು ಇನ್ನು ಎಷ್ಟು ದಿನಗಳಲ್ಲಿ ಮಾಡಲು ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಎಂ. ಚಂದ್ರಶೇಖರಿಯ್ (ಶಿಕ್ಷಣ ಮಂತ್ರಿಗಳು).—

ಅ) ೧) ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ: ೮೩೬೧.

೨) ಇವು ಸುಮಾರು ೩ ವರ್ಷಗಳಿಂದಲೂ ಖಾಲಿ ಇವೆ.

೩) ಈ ಖಾಲಿ ಹುದ್ದೆಗಳ ಪೈಕಿ, ೩೫೫೪ ಹುದ್ದೆಗಳಲ್ಲಿ ಗುತ್ತಿಗೆ ಆಧಾರದ ಶಿಕ್ಷಕರು ಸೇವೆ ಸಲ್ಲಿಸುತ್ತಿದ್ದಾರೆ.

ಆ) ನಿರುದ್ಯೋಗಿ, ಟಿ. ಸಿ. ಪೆಚ್. ತರಬೇತಿ ಪಡೆದವರು ನೇಮಕಾತಿಯಲ್ಲಿ ಗರಿಷ್ಟ ವಯೋಮಿತಿಯನ್ನು ಹೆಚ್ಚಿಸಬೇಕೆಂದು ಜಳುವಳಿ ಹೂಡಿರುವುದರಿಂದ ನೇಮಕಾತಿ ಮಾಡಲಾಗಲಿಲ್ಲ.

ಇ) ಪ್ರಸ್ತುತ ಖಾಲಿ ಹುದ್ದೆಗಳ ಸಂಖ್ಯೆಯ ಶೇಕಡ ೫೦ ರಷ್ಟನ್ನು ಸಧ್ಯದ ನಿಯಮಾವಳಿ ಪ್ರಕಾರ ಆಯ್ಕೆ ಮಾಡಿ ನೇಮಕಾತಿ ಮಾಡಿಕೊಳ್ಳಲು ಆದೇಶ ನೀಡಲಾಗಿದೆ. ಉಳಿದ ಖಾಲಿ ಹುದ್ದೆಗಳನ್ನು ನೇಮಕಾತಿ ನಿಯಮಾವಳಿಗಳಿಗೆ ತಿದ್ದುಪಡಿ ತಂದು ಭರ್ತಿ ಮಾಡಲಾಗುವುದು.